ಓ ಎಸ್ ಃ 1/2011 ಡಿಡಬ್ಲೂ ಃ 1 - ಸಯ್ಯದ್ ಜಮೀಲ್

ದಿನಾಂಕಃ ಃ 20.02.2020 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲು ಃಪ್ರತಿವಾದಿ ಪರ ಃ ಶ್ರೀ ಎನ್ ಎ ವಕೀಲರಿಂದಃ

1. ನಾವು 5 ಜನ ಅಣ್ಣ ತಮ್ಮಂದಿರು ಇದ್ದು ಅವರುಗಳೆಂದರೆ ಸಯ್ಯದ್ ಸಮೀಮ್ , ಸಯ್ಯದ್ ಸಗೀರ್, ನಾನು, ಮೃತ ಸಯ್ಯದ್ ಕಬೀರ್ ಮತ್ತು ಸಯ್ಯದ್ ಜಮೀರ್ ಇರುತ್ತೇವೆ. ನಮ್ಮಗಳ ಹೆಸರಿನ ಮುಂದೆ ಅಹಮದ್ ಎಂದು ಇರುವುದಿಲ್ಲ ಆದರೆ ಸಯ್ಯದ್ ಜಮೀರ್ ಎನ್ನುವವರ ಮಾತ್ರ ಅವರ ಹೆಸರಿನ ಮುಂದೆ ಅಹಮದ್ ಸೇರಿಸಿಕೊಂಡಿದ್ದು ಆದರಿಂದ ಅವರ ಹೆಸರು ಸಯ್ಯದ್ ಜಮೀರ್ ಅಹಮದ್ಇರುತ್ತದೆ. ಮೇಲೆ ಹೇಳಿದ ನನ್ನ ಸಹೋದರನಾದ ಸಯ್ಯದ್ ಜಮೀರ್ ಅಹಮದ್ ಎಂದಲ್ಲಿ ಈ ಕೇಸ್ ನ 1 ನೇ ಪ್ರತಿವಾದಿಯಿಂದ ಮುಖ್ತೆಯಾರ್ ಪತ್ರ ಪಡೆದು ಅದಕ್ಕನುಗುಣವಾಗಿ ನಂತರದಲ್ಲಿ ರಿಜಿಸ್ಟರ್ ಖರೀದಿ ಪತ್ರ ಮಾಡಿಕೊಟ್ಟ ವ್ಯಕ್ತಿ ಇರುವ ಎಂದರೆ ಸರಿ .

2. ಈ ಕೇಸ್ ನ ಮಾಹಿತಿಯು ನನಗೆ 2011 ನೇ ಸಾಲಿನಿಂದ ಗೊತ್ತಿರುತ್ತದೆ . ಕಾರಣ 2011 ನೇ ಸಾಲಿನಲ್ಲಿ ನನಗೆ ತಹಶೀಲ್ದಾರ್ ಕಛೇರಿಯಿಂದ ಸಮನ್ಸ್ ಬಂದಿದ್ದು ಆಗಿನಿಂದ ಈ ಕೇಸ್ ನ ಮಾಹಿತಿ ನನಗೆ ಗೊತ್ತಿರುತ್ತದೆ. ಸದರಿ ತಹಶೀಲ್ದಾರ್ ಕಛೇರಿಯಿಂದ ಸಮನ್ಸ್ ಈ ದಾವೆಯ 3 ನೇ ಪ್ರತಿವಾದಿಯ ಹೆಸರಿಗೆ ಆಸ್ತಿಯ ಖಾತೆ ಮಾಡುವ ತಕರಾರಿನ ವಿಷಯವಾಗಿ ಬಂದಿದ್ದು ನನಗೆಆಗಿನಿಂದ ಈ ಕೇಸ್ ನ ಬಗ್ಗೆ ಮಾಹಿತಿ ಬಂದಿದ್ದು ಮತ್ತು ಅದಕ್ಕೂ ಮೊದಲು ನನಗೆ ಕೇಸ್ ನ ಬಗ್ಗೆ ಮಾಹಿತಿ ಇರಲಿಲ್ಲ. ತಹಶೀಲ್ದಾರ್ ಕಛೇರಿಯಿಂದ ಸಮನ್ಸ್ ಬರುವ ಮೊದಲು ಈ ದಾವೆಯಲ್ಲಿ ಅಡಕವಾಗಿರುವ ವಿಷಯದ ಬಗ್ಗೆ ನಡೆದ ವ್ಯವಹಾರದ ಬಗ್ಗೆ ಮತ್ತು ಘಟನಾವಳಿಯ ಬಗ್ಗೆ ತಮಗೇನಾಗೂ ಮಾಹಿತಿ ಇದೆಯೇ ಮತ್ತು ತಾವು ಆ ವ್ಯವಹಾರದಲ್ಲಿ ಭಾಗಿಯಾಗಿದ್ದಿರೇ ಎಂದು ಕೇಳಲಾಗಿ ಇಲ್ಲ ಆದರೆ ನನ್ನ ತಮ್ಮನಾದ ಸಯ್ಯದ್ ಜಮೀರ್ ಅಹಮದ್ ರವರು ಈ ದಾವೆಯ 3 ನೇ ಪ್ರತಿವಾದಿಗೆ ಆಸ್ತಿಯ ಬಗ್ಗೆ ಖರೀದಿ ಪತ್ರ ಮಾಡಿಸಿದಾಗ ನಾನು ಇದ್ದೆ ಎಂದು ಮತ್ತು ಆ ವ್ಯವಹಾರದಲ್ಲಿನಾನು ಭಾಗಿಯಾಗಿದ್ದೆ ಎಂದುಸಾಕ್ಷಿ ಹೇಳುತ್ತಾರೆ.

3. ನಿಡಿಃ 6 ಎಂದು ಗುರುತಿಸಿದ ನೊಂದಣಿ ಖರೀದಿ ಪತ್ರದಲ್ಲಿ ಸಹಿ ಏನೂ ಇರುವುದಿಲ್ಲ. ನಿಡಿಃ 6 ಎಂದು ಗುರುತಿಸಿದ ನೊಂದಣಿ ಖರೀದಿ ಪತ್ರಕ್ಕೂ ಮೊದಲು ಜರುಗಿದ ಯಾವುದೇ ವ್ಯವಹಾರದಲ್ಲಿ

ನಾನೇನೂ ಭಾಗವಹಿಸಿಲ್ಲ. ನಿಡಿಃ 1 ರಿಂದ 7 ಎಂದು ಗುರುತಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿಡಿ ಇರುತ್ತದೆ. ನಿಡಿಃ 5 ಎಂದು ಗುರುತಿಸಿದ ದಾಖಲೆಯಲ್ಲಿ ಸಾಕ್ಷಿ ಎಂದು ಸಯ್ಯದ್ ಕಲೀಮ್ ಅಹಮದ್ ಎಂದು ಸಹಿ ಇದ್ದು ಅವರು ಯಾರೆಂದು ನನಗೆ ಗೊತ್ತಿರುವುದಿಲ್ಲ. ನಿಡಿಃ 5 ಎಂದು ಗುರುತಿಸಿದ ದಾಖಲೆಯನ್ನು ನಾನು ನೋಡಿ ಅದರಲ್ಲಿಯ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಡಿಃ 5 ಎಂದು ಗುರುತಿಸಿದದಾಖಲೆಯು ಬೆಂಗಳೂರಿನಲ್ಲಿ ನೊಂದಣಿಯಾಗಿದ್ದು ಆದರೆ ಯಾವ ಉಪನೊಂದಣಾಧಿಕಾರಿ ಕಛೇರಿಯಲ್ಲಿ ನೊಂದಣಿಯಾಗಿರುವುದುಎಂದು ನನಗೆ ಗೊತ್ತಿಲ್ಲ. ನಿಡಿಃ 1 ರಿಂದ 7 ಎಂದು ಗುರುತಿಸಿದ ದಾಖಲೆಗಳ ಸತ್ಯಾಸತ್ಯತೆಯನ್ನು ನಾನು ತಿಳಿದುಕೊಂಡಿರುತ್ತೇನೆ.

4. ನಿಡಿಃ 1 ರಿಂದ 7 ಎಂದು ಗುರುತಿಸಿದ ದಾಖಲೆಗಳಲ್ಲಿಯ ಅಂಶಗಳ ಬಗ್ಗೆ ನನಗೆ ಅಷ್ಟಾಗಿ ಪೂರ್ಣ ಮಾಹಿತಿ ಇರುವುದಿಲ್ಲ. ನಿಡಿಃ 3 ಎಂದು ಗುರುತಿಸಿದದಾಖಲೆಯಲ್ಲಿ ಸಯ್ಯದ್ ಗೌಸ್ ಪಾಷಾ ಎಂದು ಇರುವ ಸಹಿಯ ಬಗ್ಗೆ ನನಗೆ ಚೆನ್ನಾಗಿ ಗೊತ್ತಿರುತ್ತದೆ. ಆದರೆ ಆ ದಾಖಲೆಯ ಅಂಶಗಳ ಬಗ್ಗೆ ನನಗೆ ಗೊತ್ತಾಗುವುದಿಲ್ಲ. ನಿಡಿಃ 3 ಎಂದು ಗುರುತಿಸಿದ ದಾಖಲೆಯಲ್ಲಿ ಇರುವ ಸಯ್ಯದ್ ಗೌಸ್ ಪಾಷಾ ಎನ್ನುವವರ ಸಹಿಗಳು ಎಲ್ಲವೂ ಒಂದೇ ತೆರನಾಗಿ ಇರುತ್ತವೆ. ನಿಡಿಃ 4 ಎಂದು ಗುರುತಿಸಿದ ದಾಖಲೆಯು ಏನು ಎಂದು ಕೇಳಲಾಗಿ, ಸಯ್ಯದ್ ಗೌಸ್ ಪಾಷಾ ಇವರು ಈ ದಾವೆಯ 1 ನೇ ಪ್ರತಿವಾದಿಗೆ ಬರೆದು ನೀಡಿದ ದಾಖಲೆ ಇರುವುದು ಎಂದು ಸಾಕ್ಷಿ ಹೇಳುತ್ತಾರೆ. ನಿಡಿಃ 3 ಎಂದು ಗುರುತಿಸಿದ ದಾಖಲೆಯಲ್ಲಿ ಸಯ್ಯದ್ ಗೌಸ್ ಪಾಷಾ ಎನ್ನುವ ಸಹಿ ಮತ್ತು ನಿಡಿಃ 4 ಎಂದು ಗುರುತಿಸಿದ ದಾಖಲೆಯಲ್ಲಿ ಇರುವ ಸಯ್ಯದ್ ಗೌಸ ಪಾಷಾ ಎನ್ನುವ ಸಹಿ ನೀವು ನೋಡಿ ಅದರಲ್ಲಿಯ ಅಕ್ಷರಗಳನ್ನುಓದಲು ಆಗುವುದೇ ಎಂದು ಕೇಳಲಾಗಿ, 2 ದಾಖಲೆಯಲ್ಲಿಯ ಸಹಿ ಒಂದೇ ಇದ್ದು ಆದರೆ ನಿಡಿಃ 4 ಎಂದು ಗುರುತಿಸಿದ ದಾಖಲೆಯಲ್ಲಿ ಪಾಷಾ ಎನ್ನುವ ಬಳಿ ಪೂರ್ಣ ಬರಹ ಇಲ್ಲದೇ ಇರುವುದು ಕಾಣುವುದು ಎಂದು ಸಾಕ್ಷಿ ಹೇಳುತ್ತಾರೆ.

5. ನಿಡಿಃ 3 ಎಂದು ಗುರುತಿಸಿದ ದಾಖಲೆಯಲ್ಲಿ ಸಯ್ಯದ್ ಗೌಸ್ ಪಾಷಾ ಎನ್ನುವವರ 14 ಸಹಿಗಳು ಇದ್ದು , ಅದರಲ್ಲಿ ಪಿ ಎ ಎಸ್ ಹೆಚ್ ಎ ಎನ್ನುವ ಬರಹ ನಿಖರವಾಗಿ ಕಾಣುವುದು ಎಂದರೆ ಸರಿ. ನಿಡಿಃ 4 ಎಂದು ಗುರುತಿಸಿದ ದಾಖಲೆಯಲ್ಲಿ 6 ಕಡೆ ಸಯ್ಯದ್ ಗೌಸ್ ಪಾಷಾ ಎಂದು ಇರುವ ಸಹಿ ಇರುವುದು ಕಂಡು ಬರುತ್ತಿದ್ದು ಆದರೆ ಆ ಸಹಿಯಲ್ಲಿ ಪಾಷಾ ಎನ್ನುವುದು ನಿಖರವಾಗಿ ನಮೂದು ಇರದೇ

ಪಿ ಮಾತ್ರ ಸ್ಪಷ್ಟವಾಗಿ ಕಾಣುವುದು ಎಂದರೆ ಸರಿ . ನಿಡಿಃ 3 ಎಂದು ಗುರುತಿಸಿದ ದಾಖಲೆಯಲ್ಲಿ ಸಯ್ಯದ್ ಗೌಸ್ ಪಾಷಾ ಎನ್ನುವವರ ಸಹಿಗಳು ಕಾಣುತ್ತಿದ್ದು , ಮತ್ತು ಆ ಸಹಿಗಳಲ್ಲಿ ಗೌಸ್ ಎಂದು ಬರೆದಿರುವುದು ಗ್ಯಾಪ್ ಇರದೇ ಒಂದೇ ಶಬ್ದದಲ್ಲಿ ನಮೂದು ಇರುವುದು ಕಾಣುವುದು ಎಂದರೆ ಸರಿ . ( ಈ ಹಂತದಲ್ಲಿ ನಿಡಿಃ 3 ಎಂದುಗುರುತಿಸಿದ ದಾಖಲೆಯ ಪುಟ 14 ರಲ್ಲಿ ಇರುವ ಸಯ್ಯದ್ ಗೌಸ್ ಪಾಷಾ ಇವರ ಸಹಿಗಳನ್ನುನಿಡಿಃ 3(ಎ) ಎಂದು ಗುರುತಿಸಲಾಯಿತು.

6. ನಿಡಿಃ4 ಎಂದು ಗುರುತಿಸಿದದಾಖಲೆಯ 1 ನೇ ಪುಟದಲ್ಲಿರುವ ಸಯ್ಯದ್ ಗೌಸ್ ಪಾಷಾ ಎನ್ನುವವರ ಸಹಿಗಳನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಗೌಸ್ ಎನ್ನುವ ಶಬ್ದದಲ್ಲಿ ಗ್ಯಾಪ್ ಇರುವುದು ಕಾಣುವುದು ಎಂದರೆ ಸರಿ . ಸಾಕ್ಷಿ ಗುರುತಿಸಿದ ಸಹಿಯನ್ನು ಈಗ ನಿಡಿಃ 4 (ಎ) ಎಂದು ಗುರುತಿಸಲಾಯಿತು. ನಿಡಿಃ 3 (ಎ) ಮತ್ತು ನಿಡಿಃ 4(ಎ) ಎಂದು ಗುರುತಿಸಿದ ಸಹಿಗಳನ್ನು ಒಬ್ಬ ಸಾಮಾನ್ಯ ವ್ಯಕ್ತಿಗೆ ತೋರಿಸಿ ಕೇಳಿದಲ್ಲಿ ಆ 2 ಸಹಿಗಳು ಬೇರೆ ಬೇರೆ ಇರುವುದು ಕಾಣುವುದು ಎಂದು ಹೇಳುವರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದು ಏನೆಂದರೆ 2 ಸಹಿಗಳು ಒಂದೇ ರೀತಿ ಇರುವುದು ಕಾಣುವುದು ಎಂದು ಸಾಕ್ಷಿ ಹೇಳುತ್ತಾರೆ. ನಿಡಿಃ 3(ಎ) ಮತ್ತು ನಿಡಿಃ 4(ಎ) ಎಂದು ಗುರುತಿಸಿದ ಸಹಿಗಳು ಒಬ್ಬ ವ್ಯಕ್ತಿಗೆ ಸೇರಿದು ಇರುವುದೋ ಇಲ್ಲವೋ ಎಂದು ತಿಳಿಯಲು ಆ ದಾಖಲೆಗಳನ್ನು ವಿಧಿ ವಿಜ್ಞಾನ ಪರಿಕ್ಷಾಲಯಕ್ಕೆ ಕಳುಹಿಸಲು ನನ್ನದೇನಾು ತಕರಾರು ಇರುವುದಿಲ್ಲ.

7. ನಿಡಿಃ 4 ಎಂದು ಗುರುತಿಸಿದ ದಾಖಲೆಯ ಪುಟ 5 ರಲ್ಲಿ ಇರುವ 1 ಸಹಿಯನ್ನು ಸಾಕ್ಷಿಗೆ ತೋರಿಸಿ ಅದು ಯಾರದು ಎಂದು ಕಂಡು ಬರುವುದು ಎಂದು ಕೇಳಲಾಗಿ , ಅದನ್ನು ಬರೆದಿರುವುದನ್ನು ನೋಡಲಾಗಿ ಮತ್ತು ಅದರಲ್ಲಿಯ ಅಕ್ಷರಗಳನ್ನು ಪರಿಶೀಲಿಸಲಾಗಿ ಅದು ಸಿ ಡಿ ಎಸ್ ಬೇಗಂ ಷಾ ಇವರಿಗೆ ಸೇರಿದ್ದಾಗಿ ಕಂಡು ಬರುವುದು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಸಾಕ್ಷಿ ಗುರುತಿಸಿದ ಸಹಿಯನ್ನು ಈಗ ನಿಡಿಃ 4(ಬಿ) ಎಂದು ಗುರುತಿಸಲಾಯಿತು. ನಿಡಿಃ 5 ವಿಎಂದು ಗುರುತಿಸಿದ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಪುಟ 1 ರಲ್ಲಿ ಕಾಣುವ ಸಹಿ ಯಾರದು ಎಂದು ಕಂಡು ಬರುವುದು ಎಂದು ಕೇಳಲಾಗಿ, ಅದು ಕೂಡ ಸಿ ಡಿ ಎಸ್ ಬೇಗಂ ಷಾ ಇವರಿಗೆ ಸೇರಿದ್ದು ಅದರಲ್ಲಿ ಕಾಣುವ ಅಕ್ಷರಗಳ್ಳಿದ ಕಂಡು ಬರುವುದು ಎಂದು ಸಾಕ್ಷಿ ಹೇಳುತ್ತಾರೆ.

( ಈ ಹಂತದಲ್ಲಿ ಬೆಳಗಿನ ನ್ಯಾಯಾಲಯದ ಅವಧಿ ಮುಗಿದಿದ್ದು ವಕೀಲರು ಜಕಾಲಾವಕಾ ಶಕೋೀರುತಿತದ್ದು ಕಾರಣ ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು. )

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ